4. A total number of 10,000 tyres is expected to be produced on account of this power deal and our State will get 7000 tyres.

5. Suitable action is being taken to ensure that all vehicles carry necessary tools.

6. In addition to the above reasons, it may also be mentioned that the break-downs enroute are not due only to punctures and on tyres The Karnataka State Road Transport Corporation fleet consists of nearly 1000 vehicles which have out-lived their serviceable life. But owing to paucity of funds, it has not beed possible to replace them, Therefore these old vehicles in the fleet also contribute considerably to the number of break-downs owing to mechnical failures of various sorts.

7, However, efforts are being made to replace about 500 to 600 vehieles within the course of the next two years. Twenty five thirty seater luxury buses are being brought on the road for the long distance journeys within a month and as a matter of fact the Karnataka State Road Transport Corporation has been instructed to operate such buses for a distance of 250 K. M. from Bangalore. Replacement has also not been possible because of the fact that no substantial funds have been provided under the Transport Sector during the last three successive plans.

8. It is a fact that some of the break-downs are due to unsatisfactory maintenance regarding which government have given suitable instructions to the Karnataka State Road Transport Corporation.

ಶ್ರೀ ಬಿ. ಜಿ ಬಣಕಾರ್.—ಪ್ರಯಾಣಕರಿಗೆ ಏನಾದರು ತೊಂದರೆಯಾದಾಗ, ಮಂತ್ರಿ ಡ್ರೈವರ್ ಮತ್ತು ಕಂಡಕ್ಟರ್ ಸೌಜನ್ಯದಿಂದ ನಡೆದುಕೊಳ್ಳದಿದ್ದರೆ, ಅದನ್ನು ಮೇಲಿನ ಅಧಿಕಾರಿಗಳ ಗಮನಕ್ಕೆ ತರಲು ಈಗ ಯಾವ ಸಲಕರಣೆಯೂ ಇಲ್ಲ, ಬಸ್‌ಗಳಲ್ಲಿ ಕಂಪ್ಲೈಂಟ್ ಬುಕ್‌ಗಳು ಇರುವುದಿಲ್ಲ, ಇನ್ನು ಮುಂದೆ ಪ್ರತಿ ಬಸ್‌ನಲ್ಲಿಯೂ ಕಂಪ್ಲೈಂಟ್ ಬುಕ್ ಇಡಬೇಕೆಂಬುದು ಆದೇಶ ಕೊಡುತ್ತೀರಾ ?

SRI M. MOHAMED ALI.—The suggestion made by the hon. Member will be taken note of. What I suggest is this. Direct complaint that is made to the Chairman or the General Manager or to me, will certainly be taken cognizance of. In case the complaint books are kept in the buses, I do not know when it will come to my notice or to the notice of the Government. It will take a very long time.

PAPERS LAID ON THE TABLE

SRI D. K. NAIKAR (Minister for Law and Municipal Administration).—I beg to lay :

The Annual Financial Statement of the Bangalore Water Supply and Sewreage Board for the year 1972-73,

Under Section 17(3) of the Bangalore Water Supply and Sewerage Act, 1964.

SRI H. C. SRIKANTAIAH (Minister of State for Power).—I beg to lay :

The Annual Financial Statement Revised Budget for 1974-75 and Budget Estimate for 1975-76 of Karnataka Electricity Board.

Under Section 61 (3) of Electricity (Supply) Act, 1948.

MADAM SPEAKER.—Both the Papers are laid.

MATTER UNDER RULE 312

Re : alleged murderer in Kodihalli village on 8-4-1975 in Hoskote Taluk

ಶ್ರೀ ಸಿ. ಬೈರೇಗೌಡ (ಬೆಮಂಗಲ್).—ಮಾನ್ಯ ಅಧ್ಯಕ್ಷರೇ, ಕಳೆದ ಜನವರಿ ೧೪ ರಂದು ಕೋಡಿಹಳ್ಳಿ ಗ್ರಾಮದಲ್ಲಿ ಎಲ್ಲ ಕಡೆಯೂ ಆಚರಣೆ ಮಾಡುವಂತ ಸಂಕ್ರಾಂತಿ ಹಬ್ಬವನ್ನು ಆಚರಣೆ ಮಾಡಿದರು. ಆಂದು ಆಲ್ಲಿ ಹೊಡೆದಾಟ ಯಾವ ಕಾರಣದಿಂದ ಆಯಿತು ಎಂಬ ಬಗ್ಗೆ ನನಗೆ ಹೆಚ್ಚಿನ ವಿವರ ಗೊತ್ತಿಲ್ಲ, ಆದು ಆದ ಕೆಲವು ದಿವಸಗಳಲ್ಲಿ ಒಬ್ಬ ಹರಿಜನ ಯುವಕ ಸಾಯುತ್ತಾನೆ. ಆ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದಾಗ ಆ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳುವುದಾಗಿ ಸರ್ಕಾರದವರು ಹೇಳಿದರು. ನಂತರ ತಾ ; ೮—೪—೧೯೭೫ ರಂದು ಮಧ್ಯಾಹ್ನ ೨ ಅಥವಾ ೨—೩೦ ಗಂಟೆಯ ಸಮಯದಲ್ಲಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ಚನ್ನಬಸಪ್ಪ ಎಂಬಾತನನ್ನು ಕೆಲವರು ಸರ್ವೇ ತೋಪಿಗೆ ಕರೆದುಕೊಂಡು ಬಂದು ಆತನಿಗೆ ಇಲ್ಲದ ಚಿತ್ರಹಿಂಸೆ ಮಾಡಿ ಚೂರು ಚೂರಾಗಿ ಕತ್ತರಿಸಿದ್ದಾರೆ. ಆಂದು ಆತ ಸ್ಥಳದಲ್ಲಿಯೇ ಸತ್ತು ಹೋದ. ಯಾವ ಕಾರಣದಿಂದ ಇದು ಆಗಿದೆ ಎಂದರೆ, ಜನವರಿ ೧೪ ರಂದು ಆ ಗ್ರಾಮದಲ್ಲಿ ಏನು ಒಂದು ದುರ್ಘಟನೆ ನಡೆಯಿತು, ಆದಕ್ಕೆ ಸಂಭಂಧಪಟ್ಟ ಎರಡು ಗುಂಪಿನ ಜನರೂ ಆ ಗ್ರಾಮದಲ್ಲಿಯೇ ಇದ್ದರು. ಆ ಒಂದು ಘಟನೆ ನಡೆದ ಮೇಲೆ ಸ್ಥಳೀಯ ಪೋಲೀಸಿನವರು ಸ್ವಲ್ಪ ಜಾಗರೂಕರಾಗಿದ್ದರೆ ಹುತ್ತೊಂದು ಜೀವವನ್ನು ಅವರು ಉಳಿಸಬಹುದಾಗಿತ್ತು, ಇಂತಹ ಗಲಾಟೆ ನಡೆಯಬಹುದೆಂದು ಅವರಿಗೆ ಗೊತ್ತಿದ್ದರೂ ಸಹ ಯಾವ ಕಾರಣದಿಂದಲೋ ಏನೋ ಅವರು ಸರಿಯಾದ ಕ್ರಮ ಕೈಕೊಳ್ಳಲಿಲ್ಲ. ಈ ಕೃತ್ಯ ನಡೆದ ದಿವಸ ಅಲ್ಲಿ ೨ ಪೋಲೀಸ್ ಕಾನ್ಸ್‌ಟೇಬಲ್ಸ್‌ಗಳಿದ್ದರೆಂದು ನನಗೆ ತಿಳಿದುಬಂದಿದೆ. ಆದರೂ ಯಾವ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಲಿಲ್ಲ. ಈ ಕೃತ್ಯ ನಡೆಸಿದವರು ಟ್ರಾಕ್ಟರ್‌ನಲ್ಲಿ ಬೇರೆ ಕಡೆಗೆ ಹೋಗಿ ತಲೆ ಮರೆಸಿಕೊಂಡಿದ್ದಾರೆ. ಈ ಬಗ್ಗೆ ಸ್ಥಳೀಯ ಪೋಲೀಸಿನವರು ಸರಿಯಾದಂಥ ತನಿಖೆ ಮಾಡಲಿಲ್ಲ, ಕೊಲೆ ಮಾಡಿದವರನ್ನು ಇಲ್ಲಿಯವರೆಗೆ ಅರೆಸ್ಟ ಮಾಡಿಲ್ಲ, ಇದನ್ನು ಸಿ.ಒ.ಡಿ. ಗೆ ರೆಫರ್ ಮಾಡಿದ್ದೇವೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು,—ತಾವು ಭಾಷಣ ಮಾಡುವುದು ಬೇಡ, ಪ್ರಶ್ನೆ ಕೇಳಿ ;

10-00 A. M.

ಶ್ರೀ ಸಿ. ಬೈರೇಗೌಡ.—ಪೋಲೀಸಿನವರು ಸರಿಯಾದ ಕ್ರಮವನ್ನು ತೆಗೆದುಕೊಂಡಿದ್ದರೆ ಈ ಒಂದು ಕೊಲೆ ನಡೆಯುತ್ತಾ ಇರಲಿಲ್ಲ. ಕೊಲೆ ನಡೆದ ಮೇಲೆ ಸ್ಥಳೀಯ ಪೋಲೀಸ್ ಅಧಿಕಾರಿಗಳು ಕ್ರಮ ತೆಗೆದು ಕೊಂಡಿಲ್ಲ. ಈ ಕಾರಣಗಳಿಂದ ಈ ಬಗ್ಗೆ ಸರಿಯಾದ ವಿಚಾರಣೆ ಆಗಲೇ ಬೇಕಾಗಿದೆ. ಈ ಒಂದು ಗ್ರಾಮದಲ್ಲಿ ಒಂದೆರೆಡು ತಿಂಗಳಲ್ಲಿ ಎರಡು ಕೊಲೆ ನಡೆಯಿತು ಎಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಉಳಿಯಂವುದು ಹೇಗೆ ? ಎಲ್ಲರ ಜೀವಕ್ಕೂ ಕುತ್ತು ಇದೆ. ನಿರಾಪರಾಧಿಗಳನ್ನು ಕೊಲೆ ಮಾಡುವಂತಹ ಪರಿಸ್ಥಿತಿ ಇದೆ. ಪೋಲೀಸಿನವರು ಸಾರ್ವಜನಿಕರ ಬೇ ಜವಾಬ್ದಾರಿಯಿಂದ ಈ ಕೊಲೆ ನಡೆದಿದೆ ಆದ್ದರಿಂದ ಈ ಬಗ್ಗೆ ಸರಿಯಾದ ವಿಚಾರಣೆಯಾಗಬೇಕು. ತಪ್ಪಿತಸ್ಥರ ಮೇಲೆ ಉಗ್ರಕ್ರಮತೆಗೆದುಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.